# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ. 711/ 2022

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ1

ದಿನಾಂಕಃ **28-03-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | |
|---|---|
| ಸಾಕ್ಷಿಯ ಹೆಸರು | - ಪರಶುರಾಮ |
| ತಂದೆಯ/ಗಂಡನ ಹೆಸರು | - ಹಣಮಂತ |
| ವಯಸ್ಸು | -?38 ವರ್ಷ |
| ಉದ್ಯೋಗ | - ವ್ಯಾಪಾರ |
| ವಾಸಸ್ಥಳಃ | - ಯಾದಗಿರಿ |

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಚಾಸಾಃ4, 8 ರಿಂದ 13 ರವರೆ ಪರಿಚಯ ಇದೆ. ನನಗೆ ಮೃತನ ಪರಿಚಯ ಇದೆ . ಆರೋಪಿ ಪರಿಚಯ ಇಲ್ಲ. ಅಪಘಾತ ಹೇಗೆ ಆಯಿತು, ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ದೂರು ಕೊಟ್ಟಿರುತ್ತೇನೆ. ಆದರೆ ದೂರಿನಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಅಪಘಾತದ ಬಗ್ಗೆ ಯಾರು ವಿಷಯ ತಿಳಿಸಿರುವುದಿಲ್ಲ.

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

ಪಾಟೀ ಸವಾಲುಃ ಪರಃ ಶ್ರೀ ಹಿರಿಯ ಸ.ಸ. ವಕೀಲರಿಂದಃ

ದಿಃ 10-04-2022 ರಂದು ನನಗೆ ಬೆಃ6-30 ಗಂಟೆಗೆ ಚಾಸಾಃ8 ರವರು ಅಪಘಾತದ ಪೋನ ಮಾಡಿ ವಿಷಯ ತಿಳಿಸಿದ್ದು , ಅದರಂತೆ ನಾನು ಮತ್ತು ಚಾಸಾಃ9 ರವರು ಸ್ಥಳಕ್ಕೆ ಹೋಗಿ ನೋಡಲಾಗಿ ಲಾರಿ ಮತ್ತು ಅಟೋ ಡಿಕ್ಕಿಯಾಗಿದ್ದು, ಸದರಿ ಅಪಘಾತದಲ್ಲಿ, ನಿಸಾರ ಎನ್ನುವವರು ಸ್ಥಳದಲ್ಲಿ ಮೃತಪಟ್ಟಿದ್ದು, ಚಾಸಾಃ8 ರವರು ಹಾಜರಿದ್ದು, ಅಪಘಾತವು ಲಾರಿ ಚಾಲಕ ತನ್ನ ಲಾರಿಯನ್ನು ಅತೀ ವೇಗ ಮತುಆ ಜಾಗರೂಕತೆಯಿಂದ ನಡೆಸಿಕೊಂಡು ಬಂನದು ಅಟೋಗೆ

ಡಿಕ್ಕಿಪಡಿಸಿದ್ದರಿಂದ ಅಪಘಾತದಲ್ಲಿ ನಾಸೀರನು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಎಂಬುದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಚಾಸಾಃ8 ರವರಿಗೂ ಸಹ ಅಪಘಾತದಲ್ಲಿ ಗಾಯವಾಗಿದ್ದು , ನಂತರ ನಾನು ಠಾಣೆಗೆ ಹೋಗಿ ನಿಪಿ-1 ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿಃ 10-04-2022 ರಂದು ಬೆಃ10-30 ರಿಂದ 11-30 ರವರಗೆ ಪಂಚನಾಮೆ ಮಾಡಿದ್ದು ಪೋಲಿಸರಿಗೆ ನಾನೇ ಸ್ಥಳ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.